# ಪ್ರಸಾಧನವೆಂಬ ಪರಿಭ್ರಮಣದೊಳಗೆ...

■ ಜ್ಯೋತಿ, ಡಿ. ಬೊಮ್ಮಾ
ಕಲೆ: ಸಂತೋಷ್ ಸಸಿಹಿತ್ಲು

ಪ್ರಸಾಧನ ಪದದ ಅರ್ಥ ನನಗೆ ಗೊತ್ತಾಗಿದ್ದು ಚಲನಚಿತ್ರಗಳಿಂದ. ಅಲಂಕಾರದ ಸಮಾನಾರ್ಥಕ ಪದವೇ ಪ್ರಸಾಧನ. ಚಲನಚಿತ್ರಗಳಲ್ಲಿ ಪ್ರಸಾಧನ ಎಂಬ ಶಬ್ದದ ಕೆಳಗೆ 'ಮೇಕಪ್ ನಾಣಿ' ಎಂಬ ಹೆಸರೇ ಬಹಳ ಸಾಮಾನ್ಯವಾಗಿ ಇರುತಿತ್ತು. ಚಲನಚಿತ್ರ ಕಲಾವಿದರಿಗೆ ಅಲಂಕಾರ ಮಾಡುವವರು ಇವರು ಎಂದು ಸಾಮಾನ್ಯ ಜ್ಞಾನದಿಂದ ತಿಳಿದುಕೊಂಡಿದ್ದೆ. ಆದರೆ ಇಂಗ್ಲಿಷ್‌ನ ಮೇಕಪ್, ಮೇಕ್ ಓವರ್ ಪದಗಳು ಪ್ರಸಾಧನದ ಇಂಗ್ಲಿಷ್ ಅವತರಣಿಕೆಗಳಾಗುವವೇ, ಗೊತ್ತಿಲ್ಲ. ಏಕೆಂದರೆ ಈಗಿನ ಆಧುನಿಕ ಯುಗದ ಮೇಕಪ್‌ಗೂ ಹಿಂದಿನ ಅಲಂಕಾರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈಗ ನಾವೆಲ್ಲರೂ ಮೇಕಪ್ ವ್ಯಸನಿಗಳಾಗುತ್ತಿದ್ದೇವೆಯೇ! ಹೌದು ಎಂದೇ ಹೇಳಬಹುದು.

ನಾನು ಚಿಕ್ಕವಳಿದ್ದಾಗ ಅಲಂಕಾರ ಎಂದರೆ ಎಣ್ಣೆ ಹಚ್ಚಿ ತಲೆಬಾಚಿಕೊಂಡು, ಹೂ ಮುಡಿದು, ಮುಖಕ್ಕೆ ಪೌಡರ್ ಬಳಿದುಕೊಂಡು ಹಣೆಗೆ ಬಿಂದಿ ಇಟ್ಟುಕೊಂಡು ಹೊಸ ಬಟ್ಟೆ ಹಾಕಿಕೊಂಡರೆ ಅದೇ ಅಲಂಕಾರ. ಕ್ರಮೇಣ ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ ಬಂದಾಗ ಸ್ನೋ (moisturizer) ಎಂಬ ಬೆಳ್ಳನೆ ನುಣುಪಾದ ವಸ್ತು ನೋಡಿದೆ. ಅದನ್ನು ಮುಖಕ್ಕೆ ಹಚ್ಚಿಕೊಂಡಾಗ ಮುಖದ ಚರ್ಮ ಕೈಗೆ ನುಣುಪಾದ ಅನುಭವ ಕೊಡುತಿತ್ತು. ಅದರೊಂದಿಗೆ ಮನದಲ್ಲಿ ಏನೋ ಒಂದು ರೀತಿಯ ಪುಳಕ. ಸ್ನೋ ಹಚ್ಚಿಕೊಂಡು ಪೌಡರ್ ಹಚ್ಚಿಕೊಂಡಾಗ ಮುಖದ ಬಿಳುಪಿಗೆ ಮನ ಬೀಗುತಿದ್ದದ್ದು ಸುಳ್ಳಲ್ಲ. ಇದು ಎಂಬತ್ತರ ಕಾಲದ ಮಾತು. ಪ್ರಸಾಧನದ ಬೇರೆ ಸಾಮಗ್ರಿಗಳು ಆಗಲೂ ಇದ್ದಿರಬಹುದು. ಆದರೆ ಆಗ ನನಗೆ ಗೊತ್ತಿದ್ದದ್ದು ಇಷ್ಟೆ.

ನಾನು ಪ್ರಾಥಮಿಕ ಶಾಲೆಯಲ್ಲಿದ್ದಾಗ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ಆಡಿಸುವ ನಾಟಕದಲ್ಲಿ ನನ್ನದು ಒಂದು ಪೌರಾಣಿಕ ಪಾತ್ರವಿತ್ತು. ನಮಗೆ ಮೇಕಪ್ ಮಾಡುವವರು ನಮಗೆಲ್ಲ ಮುಖಕ್ಕೆ ಅದಾವುದೋ ಅಂಟು ದ್ರಾವಣ ಬಳಿದು ಕಣ್ಣಿಗೆ ಕಡುಗಪ್ಪು ಮತ್ತು ತುಟಿಗೆ ಕಡುಗೆಂಪು ಬಣ್ಣ ಬಳಿದು ಎಲ್ಲರ ಮುಖವೂ ನುಣ್ಣಗೆ ಮಿಂಚುವಂತೆ ಮಾಡಿ ಬಿಟ್ಟಿದ್ದರು. ಸೆಕೆಗೆ ಮುಖ ತುರಿಸಿದಾಗೊಮ್ಮೆ ಬಣ್ಣ ಕೈಗೆ ಅಂಟುತಿತ್ತು. ಆಗಲೇ ಗೊತ್ತಾಗಿದ್ದು ನಾಟಕ ಮತ್ತು ಸಿನಿಮಾದಲ್ಲಿ ನಟಿಸುವವರು ಈ ರೀತಿಯ ಪೇಂಟ್ ಮುಖಕ್ಕೆ ಬಳಿದುಕೊಂಡೆ ನಟಿಸುತ್ತಾರೆ ಎಂದು. ಅವರ ಬಗ್ಗೆ ಪಾಪ ಅನಿಸದೇ ಇರಲಿಲ್ಲ. ಆದರೆ ಆ ರೀತಿ ಪೇಂಟ್ ಬಳಿದುಕೊಂಡು ಹೈರಾಣ ಆದ್ರೂ ಫೋಟೊಗಳಲ್ಲಿ ನಮ್ಮ ಬೆಳ್ಳಗೆ ಹೊಳೆಯುವ ಮುಖ ನೋಡಿಕೊಂಡು ಸಂತೋಷಪಟ್ಟಿದ್ದೆವು. ಆದರೆ ಮನೆಯಲ್ಲಿ ಯಾವಾಗಲೂ ಸ್ನೋ ಪೌಡರ್ ಹಚ್ಚಿಕೊಂಡು ಓಡಾಡಿದರೆ ಮನೆಯ ಹಿರಿಯರಿಂದ ಬೈಸಿಕೊಳ್ಳಬೇಕಾಗುತಿತ್ತು. ನಮ್ಮ ಗ್ರಾಮೀಣ ಭಾಗದ ಕಡೆ ಚೆನ್ನಾಗಿ ಅಲಂಕಾರ ಮಾಡಿಕೊಂಡು ಓಡಾಡಿದರೆ ನಾಟಕದವರಂತೆ ಅಂತಲೋ, ಪಾತರದವರಂತೆ ಅಂತಲೋ, ನಾಚ್ ಮಾಡುವರಂತೆ ಅಂತಲೋ ವ್ಯಂಗ್ಯದ ನುಡಿಗಳನ್ನು ಕೇಳಬೇಕಾಗುತಿತ್ತು.

ಮನೆಯವರಿಂದ ಬೈಸಿಕೊಳ್ಳುತ್ತಲೇ ನಮ್ಮ ಕೌಮಾರ್ಯದ ಕುತೂಹಲದಿಂದ ಅಷ್ಟಿಷ್ಟು ಮುಖಕ್ಕೆ ತುಟಿಗೆ ಬಣ್ಣ ಬಳಿದುಕೊಂಡು ಸುಂದರವಾಗಿ ಕಾಣುವ ನಮ್ಮ ಆಸೆ ತಣಿಸಿಕೊಳ್ಳುತಿದ್ದೆವು. ಚಲನಚಿತ್ರಗಳಲ್ಲಿ ನಟಿಯರ ಸುಂದರ ಮುಖಾರವಿಂದ ನೋಡಿದಾಗಲೆಲ್ಲ ಪ್ರಾಥಮಿಕ ಶಾಲೆಯ ನನ್ನ ನಾಟಕದ ಮುಖವೇ ನೆನಪಿಗೆ ಬರುತಿತ್ತು. ಕಾಲೇಜಿಗೆ ಬಂದಾಗಲೂ ನಮ್ಮ ಅಲಂಕಾರದಲ್ಲಿ ಬಹಳ ಬದಲಾವಣೆಗಳಾವವೂ ಕಾಣಲಿಲ್ಲ. ಲಂಗ ಬ್ಲೌಸ್ ಬದಲಾಗಿ ಚೂಡಿದಾರ್‌ಗೆ ಅಪ್‌ಗ್ರೇಡ್ ಆಗಿದ್ದೆವಷ್ಟೆ.

ಈಗಿನ ಮದುವೆ ಸಮಾರಂಭಗಳು ವಿಥೌಟ್ ಮೇಕಪ್ ಆಗುವುದಕ್ಕೆ ಸಾಧ್ಯವೇ ಇಲ್ಲ ಅನ್ನುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಮದುವೆಯ ಸಂದರ್ಭದಲ್ಲಿ ಮೇಕಪ್ ಮಾಡುವವರು ಇರುತ್ತಾರೆ ಎಂಬುದೇ ಗೊತ್ತಿರಲಿಲ್ಲ ನನಗೆ. ಬ್ಯೂಟಿ ಪಾರ್ಲರ್‌ಗಳ ಬಗ್ಗೆ ಗೊತ್ತಿತ್ತಾದರೂ ಅದು ಬರಿ ಹುಬ್ಬು (eye brow) ಸುಂದರವಾಗಿ ಕಾಣುವಂತೆ ಮಾಡುವುದಕ್ಕೆ ಮಾತ್ರ ಎಂದು ತಿಳಿದುಕೊಂಡಿದ್ದೆ. ಫೇಷಿಯಲ್, ವ್ಯಾಕ್ಸ್, ಮೆನಿಕ್ಯೂರ್, ಪೆಡಿಕ್ಯೂರ್, ಥ್ರೆಡಿಂಗ್, ಹೇರ್‌ಕಟ್ ಇವೆಲ್ಲ ಮೇಕೋವರ್‌ನ ಭಾಗಗಳು ಎಂದು ತಿಳಿದಿರಲಿಲ್ಲ. ಮದುವೆಗಳಲ್ಲಿ ಮದುಮಗಳಿಗೆ ಅಲಂಕಾರ ಮಾಡಲು ಅವಳ ಸ್ನೇಹಿತೆಯರು ನೆರವಾಗುತ್ತಿದ್ದರು. ಸೀರೆ ಉಡಿಸಲು, ಹೂ ಮುಡಿಸಲು , ತಲೆ ಬಾಚಲು, ಒಡವೆ ಹಾಕಲು ಬಹಳ ಎಂದರೆ ನೇಲ್ ಪೇಂಟ್ ಹಚ್ಚಲು ಇಷ್ಟೆ. ನನ್ನ ಮದುವೆಯಲ್ಲೂ

